**All India Radio: Bangalore**
**National Bulletin In Kannada**
**27.03.2025 07.35 a.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><><><>**

ಮುಖ್ಯಾಂಶಗಳು

1. ಡಿಆರ್‌ಡಿಒ, ಭಾರತೀಯ ನೌಕಪಡೆಯಿಂದ ಶಾರ್ಟ್‌ ರೇಂಜ್‌ ಸರ್ಫೇಸ್‌ ಟು ಏರ್‌ ಕ್ಷಿಪಣಿ ಹಾರಾಟ ಯಶಸ್ವಿ
2. ಗಲ್ವಾನ್‌ ಘರ್ಷಣೆಯಿಂದ ಹಾನಿಗೊಳಗಾದ ಸಂಬಂಧ ಸರಿಪಡಿಸಲು ಭಾರತ-ಚೀನಾ ಯತ್ನ - ವಿದೇಶಾಂಗ ಸಚಿವ ಡಾ. ಎಸ್‌. ಜೈಶಂಕರ್‌
3. ದೇಶದ ಪ್ರತಿ ಜಿಲ್ಲೆಯಲ್ಲಿ ವಿವಾಹ ಪೂರ್ವ ಸಮಾಲೋಚನಾ ಕೇಂದ್ರ - ರಾಷ್ಟ್ರೀಯ ಮಹಿಳಾ ಆಯೋಗ
4. ಬೆಂಗಳೂರಿನಲ್ಲಿಂದು ನ್ಯಾನೊ ಎಲೆಕ್ಟ್ರಾನಿಕ್‌ ರೋಡ್‌ ಶೋ, ಸೆಮಿಕಂಡಕ್ಟರ್‌ ಸಮ್ಮೇಳನ
5. ಐಪಿಎಲ್‌ ಟಿ-೨೦ ಕ್ರಿಕೆಟ್‌ : ರಾಜಸ್ಥಾನ್‌ ರಾಯಲ್ಸ್‌ ವಿರುದ್ಧ ಕೊಲ್ಕೊತ್ತಾ ನೈಟ್‌ ರೈಡರ್ಸ್‌ ತಂಡಕ್ಕೆ ೮ ವಿಕೆಟ್‌ಗಳ ಭರ್ಜರಿ ಜಯ

<><><><>

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ-ಡಿಆರ್‌ಡಿಇಒ ಮತ್ತು ಭಾರತೀಯ ನೌಕಾಪಡೆಯು ಒಡಿಶಾದ ಕರಾವಳಿಯ ಚಂಡಿಪುರದ ಸಂಯೋಜಿತ ಪರೀಕ್ಷಾ ಕೇಂದ್ರದಿಂದ ದೇಶೀಯವಾಗಿ ಅಭಿವೃದ್ಧಿಪಡಿಸಲಾದ ಲಂಬವಾಗಿ ಉಡಾವಣೆ ಮಾಡಲಾದ ಶಾರ್ಟ್‌-ರೇಂಜ್‌ ಸರ್ಫೇಸ್‌-ಟು-ಏರ್‌ ಕ್ಷಿಪಣಿಯ ಯಶಸ್ವಿ ಹಾರಾಟ ಪರೀಕ್ಷೆಯನ್ನು ನಡೆಸಿತು. ಯುದ್ಧ ಸಂರಚನೆಯಲ್ಲಿ ನಿಯೋಜಿಸಲಾದ ಎಲ್ಲಾ ಶಸ್ತ್ರಾಸ್ತ್ರ ವ್ಯವಸ್ಥೆಯ ಅಂಶಗಳೊಂದಿಗೆ ಪರೀಕ್ಷೆಯನ್ನು ನಡೆಸಲಾಯಿತು. ಸ್ಥಳೀಯ ರೇಡಿಯೋ ಫ್ರೀಕ್ವೆನ್ಸಿ ಸೀಕರ್‌, ಮಲ್ಟಿ-ಫಂಕ್ಷನ್‌ ರಾಡಾರ್‌ ಮತ್ತು ಶಸ್ತ್ರಾಸ್ತ್ರ ನಿಯಂತ್ರಣ ವ್ಯವಸ್ಥೆಯನ್ನು ಕ್ಷಿಪಣಿ ಹೊಂದಿದೆ. ಕ್ಷಿಪಣಿಯ ಯಶಸ್ವಿ ಹಾರಾಟ ಪರೀಕ್ಷೆಗಾಗಿ ಡಿಆರ್‌ಡಿಒ, ಭಾರತೀಯ ನೌಕಾಪಡೆ ಮತ್ತು ರಕ್ಷಣಾ ಉದ್ಯಮವನ್ನು ರಕ್ಷಣಾ ಸಚಿವ ರಾಜನಾಥ್‌ ಸಿಂಗ್‌ ಅಭಿನಂದಿಸಿದ್ದಾರೆ. ಈ ಕ್ಷಿಪಣಿ ವ್ಯವಸ್ಥೆಯು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಭಾರತದ ಬಲಿಷ್ಠವಾದ ವಿನ್ಯಾಸ ಮತ್ತು

ಅಭಿವೃದ್ಧಿ ಸಾಮರ್ಥ್ಯಗಳಿಗೆ ಸಾಕ್ಷಿಯಾಗಿದೆ. ಇದು ಭಾರತೀಯ ನೌಕಾಪಡೆಗೆ ಮತ್ತಷ್ಟು ಬಲ ತುಂಬಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

<><><>

೨೦೨೦ ರ ಗಾಲ್ವಾನ್ ಕಣಿವೆಯ ಘರ್ಷಣೆಯಿಂದ ಹಾನಿಗೊಳಗಾದ ಸಂಬಂಧಗಳನ್ನು ಸರಿಪಡಿಸಲು ಭಾರತ ಮತ್ತು ಚೀನಾ ಪ್ರಯತ್ನಿಸುತ್ತಿವೆ ಎಂದು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಏಷ್ಯಾ ಸೊಸೈಟಿಯ ಅಧ್ಯಕ್ಷ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಕ್ಯುಂಗ್-ವಾ ಕಾಂಗ್ ಅವರೊಂದಿಗಿನ ಸಂವಾದದಲ್ಲಿ ಭಾರತ-ಚೀನಾ ಸಂಬಂಧಗಳ ಕುರಿತು ಮಾತನಾಡುತ್ತಾ ಅವರು ಈ ಹೇಳಿಕೆ ನೀಡಿದ್ದಾರೆ. ಉದ್ವಿಗ್ನ ಸಂಬಂಧವು ಎರಡೂ ಕಡೆಯವರಿಗೆ ಉಪಯೋಗವಾಗುವುದಿಲ್ಲ. ಭಿನ್ನಾಭಿಪ್ರಾಯಗಳು ವಿವಾದಗಳಾಗಿ ಬದಲಾಗಬಾರದು ಮತ್ತು ಸ್ಪರ್ಧೆಯು ಸಂಘರ್ಷವಾಗಿ ಬದಲಾಗಬಾರದು ಎಂದು ಡಾ. ಜೈಶಂಕರ್ ಪ್ರತಿಪಾದಿಸಿದರು. ಕಳೆದ ವರ್ಷ ಅಕ್ಟೋಬರ್‌ನಿಂದ ಎರಡೂ ದೇಶಗಳ ನಡುವಿನ ಸಂಬಂಧಗಳು ಸ್ವಲ್ಪ ಸುಧಾರಣೆ ಕಂಡಿವೆ. ಎರಡೂ ರಾಷ್ಟ್ರಗಳು ತಮ್ಮ ಸಂಬಂಧಗಳ ವಿವಿಧ ಅಂಶಗಳಲ್ಲಿ ಕೆಲಸ ಮಾಡುತ್ತಿವೆ ಎಂದು ಅವರು ಹೇಳಿದರು. ಭಾರತ ಮತ್ತು ಚೀನಾ ಅನೇಕ ವಿಷಯಗಳಲ್ಲಿ ಸ್ಪರ್ಧಿಸುತ್ತವೆ. ಆದರೆ ಪರಸ್ಪರ ಸ್ಪರ್ಧಿಸುತ್ತವೆ ಎಂಬ ಕಾರಣದಿಂದಾಗಿ ಎರಡೂ ದೇಶಗಳ ನಡುವೆ ಸಂಘರ್ಷ ಇರಬೇಕು ಎಂದು ಅರ್ಥವಲ್ಲ ಎಂದು ಸಚಿವ ಡಾ. ಎಸ್. ಜೈಶಂಕರ್ ಅಭಿಪ್ರಾಯಪಟ್ಟರು.

ಧ್ವನಿ : ಡಾ. ಎಸ್. ಜೈಶಂಕರ್ (೨೦ ಸೆಕೆಂಡ್ಸ್)

<><><>

ದೇಶದ ಪ್ರತಿ ಜಿಲ್ಲೆಯಲ್ಲಿ ವಿವಾಹಪೂರ್ವ ಸಮಾಲೋಚನಾ ಕೇಂದ್ರವನ್ನು ತೆರೆಯುವುದಾಗಿ ರಾಷ್ಟ್ರೀಯ ಮಹಿಳಾ ಆಯೋಗ ತಿಳಿಸಿದೆ. ಬಿಹಾರದ ಪಾಟ್ನಾದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ ರಹತ್ಕರ್, ಈ ವರ್ಷದ ಅಂತಾರಾಷ್ಟ್ರೀಯ ಮಹಿಳಾ ದಿನದಂದು ಪ್ರಾರಂಭಿಸಲಾದ ಆಯೋಗದ ಹೊಸ ಉಪಕ್ರಮ ಇದು ಎಂದು ಹೇಳಿದರು. ಇದುವರೆಗೆ ೧೧ ರಾಜ್ಯಗಳಲ್ಲಿ ಇಂತಹ ೨೩ ಕೇಂದ್ರಗಳನ್ನು ತೆರೆಯಲಾಗಿದೆ. ಈ ಸಮಾಲೋಚನಾ ಕೇಂದ್ರಗಳನ್ನು ಸರ್ಕಾರಿ ಸ್ಥಳಗಳಲ್ಲಿ ತೆರೆಯಲಾಗುವುದು ಮತ್ತು ಜಿಲ್ಲಾ ಅಥವಾ ಪುರಸಭೆ ಸಂಸ್ಥೆಗಳ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಲಾಗುವುದು ಎಂದು ಅವರು ಮಾಹಿತಿ ನೀಡಿದರು. ಈ ವಿವಾಹಪೂರ್ವ ಸಮಾಲೋಚನಾ ಕೇಂದ್ರಗಳು ವಿವಾಹವಾಗಲಿರುವ ದಂಪತಿಗಳಿಗೆ

ಸಹಾಯ ಮಾಡುತ್ತವೆ. ವಿವಾಹದ ಸಾಮಾಜಿಕ ಮನೋವಿಜ್ಞಾನ ಮತ್ತು ನಡವಳಿಕೆಯ ಅಂಶಗಳ ಬಗ್ಗೆ ಕೇಂದ್ರದ ಸಲಹೆಗಾರರು ಸಹಾಯ ಮಾಡುತ್ತಾರೆ ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ ರಹತ್ಕರ್ ತಿಳಿಸಿದರು. ಹೆಚ್ಚುತ್ತಿರುವ ವೈವಾಹಿಕ ಮನಸ್ತಾಪಗಳು, ವಿಚ್ಛೇದನ ಪ್ರಕರಣಗಳು ಕಳವಳಕಾರಿ ವಿಷಯಗಳಾಗಿವೆ. ಏಕೆಂದರೆ ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಿ ವಿಭಜನೆಯಾಗುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು.

<><><><>

ಕೇಂದ್ರ ಸರ್ಕಾರದ ಸತ್ಯ ಪರಿಶೀಲನಾ ಘಟಕವು ಕಳೆದ ಮೂರು ವರ್ಷಗಳಲ್ಲಿ ಒಂದು ಸಾವಿರದ ೫೦೦ಕ್ಕೂ ಹೆಚ್ಚು ನಕಲಿ ಸುದ್ದಿಗಳನ್ನು ಗುರುತಿಸಿದೆ. ಲೋಕಸಭೆಯಲ್ಲಿ ನಿನ್ನೆ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಇದುವರೆಗೆ ೭೨ ಸಾವಿರಕ್ಕೂ ಹೆಚ್ಚು ದೂರುಗಳನ್ನು ಸ್ವೀಕರಿಸಲಾಗಿದೆ. ಭಾರತ ಸರ್ಕಾರದ ವಾರ್ತಾ ಶಾಖೆಯ ಸತ್ಯ ಶೋಧನಾ ಘಟಕವು ತನ್ನ ಸಾಮಾಜಿಕ ಮಾಧ್ಯಮ ಹ್ಯಾಂಡಲ್‌ಗಳಲ್ಲಿ ಸತ್ಯ ಶೋಧನೆ ಮತ್ತು ಸರಿಯಾದ ಮಾಹಿತಿಯನ್ನು ಪೋಸ್ಟ್ ಮಾಡುತ್ತದೆ ಎಂದು ತಿಳಿಸಿದರು. ಸರ್ಕಾರಕ್ಕೆ ಸಂಬಂಧಿಸಿದ ನಕಲಿ ಸುದ್ದಿ ಮತ್ತು ತಪ್ಪು ಮಾಹಿತಿಯ ಪ್ರಸರಣವನ್ನು ನಿಯಂತ್ರಿಸುವ ಉದ್ದೇಶದಿಂದ ೨೦೧೯ರಲ್ಲಿ ಸತ್ಯ ಶೋಧನಾ ಘಟಕವನ್ನು ಸ್ಥಾಪಿಸಲಾಗಿದೆ ಎಂದು ಅವರು ಹೇಳಿದರು. ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪ್ರಸಾರವಾಗುವ ಸುದ್ದಿಗಳ ಕುರಿತು ಜನರು ತಮ್ಮ ದೂರುಗಳು ಮತ್ತು ಸತ್ಯ ಶೋಧನಾ ಮನವಿಗಳನ್ನು ವಾಟ್ಸಾಪ್ ಸಂಖ್ಯೆ - ೮೭೯೯೭೧೧೨೫೯ ಮತ್ತು ಪಿಐಬಿ ಸತ್ಯ ಶೋಧನಾ ಘಟಕದ ವೆಬ್‌ಸೈಟ್ ಮೂಲಕ ಕಳುಹಿಸಬಹುದು ಎಂದು ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ ನೀಡಿದರು.

<><><><>

ಬೆಂಗಳೂರಿನಲ್ಲಿ ಇಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ನ್ಯಾನೊ ಎಲೆಕ್ಟ್ರಾನಿಕ್ಸ್ ರೋಡ್ ಶೋ ಮತ್ತು ಸೆಮಿ ಕಂಡಕ್ಟರ್ ಪರಿಸರ ವ್ಯವಸ್ಥೆಯ ಸಮ್ಮೇಳನ ಆಯೋಜಿಸಿದೆ. ಕ್ವಾಂಟಮ್ ತಂತ್ರಜ್ಞಾನ, ಕೃತಕಬುದ್ಧಿಮತ್ತೆ, ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ಮತ್ತು ಸ್ಥಳೀಯ ನ್ಯಾನೊ ತಂತ್ರಜ್ಞಾನದ ಪ್ರಗತಿಗಳನ್ನು ರೋಡ್ ಶೋದಲ್ಲಿ ಪ್ರದರ್ಶಿಸಲು ನಿರ್ಧರಿಸಲಾಗಿದೆ. ಆತ್ಮನಿರ್ಭರ ಭಾರತಕ್ಕಾಗಿ ಪ್ರಮುಖ ಪಾಲುದಾರರನ್ನು ಒಟ್ಟುಗೂಡಿಸಲು, ನಾವೀನ್ಯತೆ ಪ್ರದರ್ಶಿಸಲು ಮತ್ತು ಹೂಡಿಕೆಗಳನ್ನು ಆಕರ್ಷಿಸಲು ಈ ಸಮ್ಮೇಳನವನ್ನು

ಆಯೋಜಿಸಲಾಗಿದೆ. ಐಐಎಸ್‌ಸಿ ಬೆಂಗಳೂರು, ಐಐಟಿ ಬಾಂಬೆ, ಐಐಟಿ ಮದ್ರಾಸ್, ಐಐಟಿ ದೆಹಲಿ, ಐಐಟಿ ಖರಗ್‌ಪುರ ಹಾಗೂ ಐಐಟಿ ಗುವಾಹಟಿಯ ಸಹಭಾಗಿತ್ವದಲ್ಲಿ ಸಮ್ಮೇಳನ ಆಯೋಜನೆಗೊಂಡಿದೆ. ಕಾರ್ಯಕ್ರಮದಲ್ಲಿ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್ ಕೃಷ್ಣನ್, ಇಸ್ರೋ ಅಧ್ಯಕ್ಷ ವಿ.ನಾರಾಯಣನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಈ ಸಮ್ಮೇಳನದಲ್ಲಿ ೨೫ ಡೀಪ್‌ಟೆಕ್ ನವೋದ್ಯಮಗಳು, ೨೫ ಇತರ ಕೈಗಾರಿಕಾ ಕೇಂದ್ರಗಳು ಹಾಗೂ ೨೫ ಬಂಡವಾಳ ಹೂಡಿಕೆ ಸಂಸ್ಥೆಗಳು ಭಾಗವಹಿಸಲಿವೆ.

<><><><>

ಕಲ್ಲಿದ್ದಲು ಸಚಿವಾಲಯವು ನವದೆಹಲಿಯಲ್ಲಿ ಇಂದು ೧೨ ನೇ ಕಂತಿನ ವಾಣಿಜ್ಯ ಕಲ್ಲಿದ್ದಲು ಗಣಿ ಹರಾಜನ್ನು ಪ್ರಾರಂಭಿಸಲಿದೆ. ಹರಾಜಿಗೆ ಪರಿಗಣಿಸಿರುವ ಗಣಿಗಳಲ್ಲಿ, ೧೩ ಕಲ್ಲಿದ್ದಲು ಗಣಿಗಳನ್ನು ಸಂಪೂರ್ಣವಾಗಿ ಅನ್ವೇಷಿಸಲಾಗಿದೆ. ಆದರೆ ೧೨ ಗಣಿಗಳನ್ನು ಭಾಗಶಃ ಅನ್ವೇಷಿಸಲಾಗಿದೆ. ಇದು ತಕ್ಷಣದ ಮತ್ತು ಭವಿಷ್ಯದ ಅಭಿವೃದ್ಧಿಗೆ ಅವಕಾಶಗಳನ್ನು ಒದಗಿಸುತ್ತದೆ.  ೧೨ನೇ ಕಂತಿನ ವಾಣಿಜ್ಯ ಕಲ್ಲಿದ್ದಲು ಗಣಿ ಹರಾಜು ದೇಶೀಯ ಮತ್ತು ಅಂತಾರಾಷ್ಟ್ರೀಯ ಹೂಡಿಕೆದಾರರಿಂದ ಗಮನಾರ್ಹ ಆಸಕ್ತಿಯನ್ನು ಆಕರ್ಷಿಸುವ ಗುರಿಯನ್ನು ಹೊಂದಿದೆ. ಇದು ಇಂಧನ ಮತ್ತು ಕೈಗಾರಿಕಾ ಬೆಳವಣಿಗೆಯಲ್ಲಿ ಭಾರತದ ಸ್ವಾವಲಂಬನೆಗೆ ಬದ್ಧತೆಯನ್ನು ಬಲಪಡಿಸುತ್ತದೆ.

<><><><>